ಅಂಡರ್‌ವರ್ಲ್ಡ್ ಜಗತ್ತಿನ ಪರಿಚಯ ಮುಂಬಯಿಯ ಅತಿ ದೊಡ್ಡ ಶ್ರೀಮಂತರಿಗೆ, ದೊಡ್ಡ ದೊಡ್ಡ ಉದ್ಯಮಿ–ವ್ಯಾಪಾರಿಗಳಿಗೆ, ಕೆಲವು ರಾಜಕೀಯ ವ್ಯಕ್ತಿಗಳಿಗೆ, ಸಿನಿಮಾ ನಾಯಕ–ನಾಯಕಿಯರಿಗೆ, ನಿರ್ಮಾಪಕರಿಗೆ, ಡ್ಯಾನ್ಸ್ ಬಾರ್ ಓನರ್‌ಗಳಿಗೆ ಇರುತ್ತದೆ ಎಂಬ ಸತ್ಯ ಅರಿತವನೇ ಆಗಿದ್ದ ಗುನ್ನಾಲಾಲ್. ಹಾಜಿ ಮಸ್ತಾನನಿಗೆ ಮುಂಬಯಿಯಲ್ಲಿ ಎದುರು ಹೇಳುವವರೇ ಇಲ್ಲ. ತಾನು ಹಾಗೆ ಹೀಗೆ ದುಡಿದಿದ್ದರಲ್ಲಿ ಅರ್ಧದಷ್ಟು ಬಡವರಿಗೆ ಹಂಚುತ್ತಾನೆ. ಹಾಗಾಗಿ ಪ್ರಸಿದ್ಧ ಸಿನಿಮಾ ತಾರೆಯರಿಗಿಂತಲೂ ಮಸ್ತಾನ್ ಮುಂಬಯಿಯಲ್ಲಿ ಮಿಂಚುತ್ತಿದ್ದಾನೆ ಮತ್ತು ಅಗಾಧವಾದ ಖ್ಯಾತಿಯನ್ನು ಪಡೆದಿದ್ದಾನೆ. ರಾಜಕಾರಣಿಗಳು, ಪೊಲೀಸ್ ಅಧಿಕಾರಿಗಳು ಮಸ್ತಾನನ ಸ್ನೇಹಕ್ಕೆ, ಸಹಾಯಕ್ಕೆ ಕೈಚಾಚುತ್ತಾರೆ. ಕ್ಷಣ ಮುಂಬಯಿಯ ಇನ್ನೊಬ್ಬ ಡಾನ್ ಅರುಣ್ ಗಾವ್ಳಿ ನೆನಪಾದ. ಒಂದಷ್ಟು ವರ್ಷ ಲೇಬರ್ ಯೂನಿಯನ್ ಲೀಡರಾಗಿದ್ದ ಗಾವ್ಳಿ ಸುಮಾರು ಬಾರಿ ಗುನ್ನಾಲಾಲನ ಫ್ಯಾಕ್ಟರಿಗೆ ಭೇಟಿ ಕೊಟ್ಟಿದ್ದಾನೆ. ಅವರಿಬ್ಬರ ಮಧ್ಯೆ ಒಳ್ಳೆಯ ಪರಿಚಯ ಕೂಡ ಇತ್ತು. ತನ್ನ ಮಿಲ್ಲಿನಲ್ಲಿ ಒಂದೆರಡು ಸಾರಿ ಕಾರ್ಮಿಕರು ಗಲಾಟೆ ಮಾಡಿದಾಗ ಗಾವ್ಳಿ ಬಂದು ಅರ್ಧ ಗಂಟೆಯಲ್ಲಿ ಸಮಸ್ಯೆ ಬಗೆಹರಿಸಿದ್ದ. ನಂತರ ಗುನ್ನಾಲಾಲನ ಮಿಲ್ಲಿನಲ್ಲಿ ಕಾರ್ಮಿಕರ ಸಮಸ್ಯೆಗಳು ಕಾಣಿಸಿಕೊಳ್ಳಲಿಲ್ಲ. ನೆನಪಾಗಿದ್ದೇ ತಡ ಗಾವ್ಳಿಗೆ ಫೋನ್ ಮಾಡಿದ್ದ. ಎಲ್ಲವನ್ನೂ ಕೇಳಿದ ಗಾವ್ಳಿ–

'ಸೇಟ್ ಜೀ ಮಸ್ತಾನನಾಗಲೀ, ನಾನಾಗಲೀ ನಮ್ಮ ವ್ಯವಹಾರಗಳಲ್ಲಿ ನಿಷ್ಠೆಯಿಂದಲೇ ಇರುತ್ತೇವೆ. ನಿನ್ನ ಗೋಡೌನಿನಲ್ಲಿ ಬಂದು ಬಿದ್ದ ಸೋನಾ ಅವಂದೇ. ನನಗೆ ಮೊನ್ನೆಯೇ ಸುದ್ದಿ ಬಂತು. ನಿಮ್ಮ ಏರಿಯಾ ಮಸ್ತಾನನ ವ್ಯಾಪ್ತಿಗೆ ಬರುತ್ತದೆ. ಸುಮ್ಮನೆ ಪೀಕಲಾಟಕ್ಕೆ ಇಟ್ಕೊಬೇಡ. ಹವಾಲಾ ಕೇಸಿದು, ಮೈಮೇಲೆ ಎಳ್ಕೊಳೋದಕ್ಕೆ ಹೋಗ್ಬೇಡ, ಅವನ ಜೊತೆ ಪೊಲೀಸರ ಸಹವಾಸ ಜಾಸ್ತಿ ಇದೆ. ಈ ಮುಂಬಯಿಯೇ ಹಾಗೆ. ಬದುಕಿಗಾಗಿ ಒಬ್ಬರನ್ನೊಬ್ಬರು ಆಶ್ರಯಿಸಬೇಕು. ಇಲ್ಲಿ ಎಂಥಾ ಬಲಾಢ್ಯನಾಗಲೀ, ಎಂಥಾ ದರಿದ್ರನಾಗಲೀ ಒಬ್ಬರಿಗೊಬ್ಬರು **parasites** ಆಗಿಯೇ ಬದುಕಬೇಕು. **parasite** ಅಂದರೆ ಗೊತ್ತಾಲ್ಲ, ಪರಾವಲಂಬಿ ಅಂತ. ನಾನು, ನೀನು, ಮಸ್ತಾನ್, ಪೊಲೀಸ್ ಕಮಿಷನರ್ ಅಷ್ಟೇಕೆ, ರೆಡ್ ಲೈಟ್ ಏರಿಯಾದ ವೇಶ್ಯೆಯರು ಎಲ್ಲರೂ ಒಬ್ಬರಿಗೊಬ್ಬರು ಪ್ಯಾರಾಸೈಟುಗಳೇ...' ಎಂದು ಉಪದೇಶ ಮಾಡಿದ್ದ. ಸರಿ, ಗಾವ್ಳಿಯ ಮಾತನ್ನು ಮಫತ್ಲಾಲ್ ಗುನ್ನಾಲಾಲ್ ತೆಗೆದುಹಾಕಲಿಲ್ಲ. ಈ ಕೇಸಲ್ಲಿ ಗುನ್ನಾಲಾಲನಿಗೆ ಕೋಟ್ಯಂತರ ರೂಪಾಯಿ ಲಾಭವೇ ಆಗಿತ್ತು. ಜೊತೆಗೆ ಮಸ್ತಾನ್ ಫೋನ್ ಮಾಡಿ ಮೆಚ್ಚಿಕೊಂಡಿದ್ದನಲ್ಲದೆ 'ಏನಾದರೂ ತೊಂದರೆಯಾದರೆ ತಿಳಿಸಿ ಸೇಟ್ ಜೀ. ನನ್ನನ್ನು ನಿಮ್ಮ ಒಡಹುಟ್ಟಿದ ಸಹೋದರನಂತೇ ತಿಳಿದುಕೊಳ್ಳಿ' ಎಂದು ಹೇಳಿದ್ದ.

ಗುನ್ನಾಲಾಲ್ ಒಬ್ಬ ಚತುರ ವ್ಯಾಪಾರಿ. ಯಾವಾಗ ಯಾರನ್ನು ಯಾವುದಕ್ಕೆ ಬಳಸಿಕೊಳ್ಳಬೇಕೆಂಬ ಬುದ್ಧಿವಂತಿಕೆ ಉಳ್ಳವನಾಗಿದ್ದ. ಮುಂಬಯಿಯಲ್ಲಿರುವ ಬಹುತೇಕ ಶ್ರೀಮಂತರು ಇಂಥ ಹೊಂದಾಣಿಕೆ ಬುದ್ಧಿಯವರೇ ಆಗಿದ್ದಾರೆ. ಇದಾದ ಮಾರನೆಯ ದಿನವೇ ಏಕೋ ಗುನ್ನಾಲಾಲನಿಗೆ ತಾನು ಮುಂಬೈ ಬದುಕು ಶುರು ಮಾಡಿದ ಧಾರಾವಿಯಿಂದ ಒಂದಿಬ್ಬರು ಜೋಗಿತಿಯರನ್ನು ಕರೆಸಿ ಮೊಮ್ಮಗ ಸೋನಾಲಾಲನ ಭವಿಷ್ಯದ ಬಗ್ಗೆ ಕೇಳಬೇಕು ಅನ್ನಿಸಿತು. ಅದಕ್ಕೆ ಕಾರಣವೂ ಇಲ್ಲದೇನಿಲ್ಲ. ಅವನು ಮುಂಬಯಿಗೆ ಬಂದ ಪ್ರಾರಂಭದಲ್ಲಿ ಧಾರಾವಿಯಲ್ಲಿದ್ದ ಮೂರು ವರ್ಷಗಳ ಪೂರ್ತಿ ಅವಧಿಯಲ್ಲಿ ವಾರಕ್ಕೊಮ್ಮೆಯಾದರೂ ಅವನ ಮುಖ ನೋಡಿದಾಗ ಅಲ್ಲಿ ಪ್ರತಿದಿನ ಅಡ್ಡಾಡುತ್ತಿದ್ದ ಜೋಗಿತಿಯರು ಅವನನ್ನು ಅಡ್ಡಗಟ್ಟಿ ನಿಲ್ಲಿಸಿ 'ನೀನು ಇಲ್ಲಿ ಇರಲು ಲಾಯಕ್ಕಲ್ಲ ಮಗನೆ, ಬೇಗನೆ ಇಲ್ಲಿಂದ ಜಾಗ ಖಾಲಿ ಮಾಡ್ತೀಯ. ಅದೋ ನೋಡು ಆ ತೂಗಾಡುವ ಅರಮನೆಯನ್ನು ನೀನು ಬೇಗ ಸೇರ್ಕೋತಿಯ. ಅಂಥ ವರ್ಚಸ್ಸು ಇದೆ ನಿನ್ನ ಮುಖದಲ್ಲಿ. ಟಾಟಾ, ಬಿರ್ಲಾ, ರಾಜ್ ಕಪೂರ್ ಮುಂತಾದವರ ಕೈ ರೇಖೆಗಳನ್ನು ನೋಡಿರೋಳು ನಾನು. ನಿನ್ನ ಅಂಗೈಯಲ್ಲೂ ಸೇಮ್ ಟು ಸೇಮ್ ರೇಖೆಗಳಿವೆ. ನೀನು ಪುಷ್ಪಕ ವಿಮಾನದಲ್ಲಿ ಓಡಾಡುವ ಭಾಗ್ಯ ಪಡೆದಿರುವುದು ಮುಂಬಾ ದೇವಿಯಾಣೆಗೂ ಸುಳ್ಳಲ್ಲ. ನಿನ್ನ ಕಣ್ಣುಗಳಲ್ಲಿ ಅದೆಂಥ ಆಕರ್ಷಣೆ ಇದೆಯೋ ಹುಡುಗ, ಥೇಟ್ ರಾಜ್ ಕಪೂರ್ ಕಣ್ಣಲ್ಲಿ ಇರುವಂಥ ಮಿಂಚು. ಶಿವಾಜಿ ಪಾರ್ಕ್‌ನಲ್ಲಿ ಒಮ್ಮೆ ಶೂಟಿಂಗ್‌ನಲ್ಲಿರುವಾಗ ನಾನು ಕಪೂರನ ಕೈ ಹಿಡಿದು ನೋಡಿದ್ದೆ. ಅದಾದ ಮೇಲೇನೇ ಅವನು 'ಮೇರಾ ನಾಮ್ ಜೋಕರ್' ಸಿನಿಮಾದಲ್ಲಿ ಆಕ್ಟ್ ಮಾಡಿದ್ದು! ಆದ್ರೆ ರಾಜ್ ಕಪೂರ್ ಬಾರಿ ಜುಗ್ಗ. ಕೈ ನೋಡಿದ್ದಕ್ಕೆ ನಾಲ್ಕಾಣೇನೂ ಜೇಬಿನಿಂದ ತೆಗೆದು ನನ್ನ ಈ ಸೆರಗಿಗೆ ಹಾಕಲಿಲ್ಲ. ನೀನು ಅವನಂತೆ ಖಂಡಿತಾ ಜುಗ್ಗ ಅಲ್ಲ ಬಿಡು' ಇತ್ಯಾದಿಯಾಗಿ ಹೇಳಿ ನಾಲ್ಕಾಣೆ, ಎಂಟಾಣೆಗಳನ್ನು ಸೆರಗಿಗೆ ಹಾಕಿಸಿಕೊಳ್ಳುತ್ತಿದ್ದರು.

ಅಂಥ ಟೈಮಿನಲ್ಲಿ ಪಕ್ಕದ ಚಹದಂಗಡಿಯ ಮುದುಕಿ ರಜಿಯಾ ಬೇಗಂ 'ನೋಡು ಗುನ್ನಾಲಾಲ್, ನನಗೀಗ ಎಪ್ಪತ್ತು ವರ್ಷ. ನಾನು ಈ ಧಾರಾವಿ ಕೊಳಗೇರಿ ಕೊಂಪೆಗೆ ಬಂದು ಐವತ್ತು ವರ್ಷಗಳ ಮೇಲಾಗಿರಬೇಕು. ಈ ಜೋಗಿತಿಯರು ಇಲ್ಲಿನ ಪ್ರತಿಯೊಬ್ಬರಿಗೂ ಇದೇ ಮಾತುಗಳನ್ನು ಹೇಳುವುದನ್ನು ಕೇಳಿ ಕೇಳಿ ನನ್ನ ಕಿವಿ ತೂತಾಗಿವೆ. ಅವರ ಮಾತುಗಳು ನಿಜವೇ ಆಗುವುದಾದರೆ ಈ ಧಾರಾವಿಯ ಅರ್ಧದಷ್ಟು ಜನ ಈಗಾಗಲೇ ಜುಹೂ, ಬಾಂದ್ರಾ, ವೊರಿಲಿ, ಮಲ್ಬಾರ್ ಹಿಲ್ಸ್, ಅಲ್ಟಾಮೌಂಟ್ ರೋಡ್, ಕೊಲಾಬಾ ಮುಂತಾದ ಕಡೆ ಬದುಕಬೇಕಿರುತ್ತಿತ್ತು. ಪಾಪ, ಅವರು ತಾನೇ ಏನು ಮಾಡ್ತಾರೆ? ಕರುಳು ತುಂಬಿಸಿಕೊಳ್ಳಬೇಕಲ್ಲ. ಕರುಳಿನ ಜಂಜಾಟವೇ ಇಲ್ಲದಿದ್ದಲ್ಲಿ ಈ ಧಾರಾವಿಯಲ್ಲಿ, ಆ ನಾಗ್ಪಾಡಿನ ರೆಡ್‌ಲೈಟ್ ಏರಿಯಾಗಳಲ್ಲಿ ಜನ ಚರಂಡಿಯ ಹುಳುಗಳಂತೆ ಏಕೆ ಪಿತುಗುಡುತ್ತಿದ್ದರು? ಆದರೂ ಆ ದೊಡ್ಡ ಬಂಗಲೆಗಳಲ್ಲಿನ ಗಂಡಸರು, ಹೆಂಗಸರುಗಳಿಗಿಂತಲೂ ಇಲ್ಲಿನ ಗಂಡಸರು, ಹೆಂಗಸರು ದಿಲ್ದಾರಾಗಿ ತಮ್ಮ ಬಯಕೆಗಳನ್ನು ಈಡೇರಿಸಿಕೊಂಡು ಪಸಂದಾಗಿ ಬದುಕ್ತಾ ಇದಾರೆ. ನಾನೇ ನೋಡು, ನಿಮ್ಮ ಮಫತ್ಲಾಲ್ ಫ್ಯಾಕ್ಟರಿ ಓನರ್ ಹೆಂಡತಿಗಿಂತ್ಲೂ ಸಾವಿರ ಪಾಲು ನೆಮ್ಮದಿಯಿಂದ ಬದುಕ್ತಾ ಇದೀನಿ. ಇಲ್ಲಿ ನಾಟಕ ಇಲ್ಲ, ಎಲ್ಲವೂ ಖುಲ್ಲಂಖುಲ್ಲಾ. ಆದರೂ ಈ ಜೋಗಿತಿಯರ ಮಾತನ್ನು ತೆಗೆದುಹಾಕುವಂತಿಲ್ಲ. ಹತ್ತು ಲಕ್ಷ ಜನರಲ್ಲಿ ಅವರು ಹೇಳಿದ್ದು ಒಬ್ಬರ ಬದುಕಿನಲ್ಲಿ ನಿಜ ಆದರೂ ಆಗಬಹುದು...' ಎಂದು ಬಲವಾದ ಗೊಂದಲದಲ್ಲಿ ಮುಳುಗಿಸಿಬಿಡುತ್ತಿದ್ದಳು.

ರಜಿಯಾ ಬೇಗಂಳ ಮಾತುಗಳು ಈಗ ನೆನಪಾಗಿ ಗುನ್ನಾಲಾಲ್ ಬೆವೆತು ಹೋಗಿ ಜೋಗಿತಿಯರ ಸಹವಾಸವೇ ಬೇಡವೆಂದು ಸುಮ್ಮನಾಗಿಬಿಟ್ಟಿದ್ದ. ಮಗ ಭವರ್ ಲಾಲ್ ಹುಟ್ಟಿದಾಗ ಕೂಡ ಹೆಸರು ಬಲ, ನಕ್ಷತ್ರಗಳ ಬಗ್ಗೆ ಯಾರನ್ನೂ, ಏನನ್ನೂ ಕೇಳಿರಲಿಲ್ಲ. ಭವರ್ ಲಾಲ್ ಬಿಕಾಂನಲ್ಲಿ ಯೂನಿವರ್ಸಿಟಿಗೆ ಮೊದಲನೆಯವನಾಗಿ ಉತ್ತೀರ್ಣನಾಗಿದ್ದ. ಲೆಕ್ಕದ ವಿಷಯದಲ್ಲಿ ಅವನ ಮೆದುಳು ಕ್ಯಾಲಿಕ್ಯುಲೇಟರನ್ನು ಮೀರಿಸುವಂತಿತ್ತು. ಮಿಡ್ಲ್ ಸ್ಕೂಲಿನಲ್ಲಿರುವಾಗಲೇ ತನ್ನ ತಂದೆಯ ಬಿಸಿನೆಸ್ ಲೆಕ್ಕಾಚಾರಗಳನ್ನು ಅನಾಯಾಸವಾಗಿ ಹೇಳುತ್ತಿದ್ದ. ಬಿಸಿನೆಸ್‌ಮನ್‌ಗಳು ತಮ್ಮ ಮಕ್ಕಳನ್ನು ಮಾಮೂಲಿಯಾಗಿ ಬಿಕಾಂ ಓದಿಸುವಂತೆ ಗುನ್ನಾಲಾಲ್ ಕೂಡಾ ಮಗ ಭವರ್ ಲಾಲನನ್ನು ಬಿಕಾಂ ಓದಿಸಿದ. ಅಕೌಂಟೆನ್ಸಿಯಲ್ಲಿ ಅವನ ಇಂಟೆಲಿಜೆನ್ಸಿಗೆ ಉಪನ್ಯಾಸಕರು ಬೆರಗಾಗುತ್ತಿದ್ದರು. ಬಿಕಾಂ ಮುಗಿಯುತ್ತಲೇ ಎಂಕಾಂಗೂ ಕಳಿಸದೆ ಗುನ್ನಾಲಾಲ್ ಭವರ್ ಲಾಲನನ್ನು ಕಂಪನಿಯ ವ್ಯವಹಾರಗಳಲ್ಲಿ ಇಳಿಸಿಬಿಟ್ಟ. ಮನೆಯಲ್ಲಿದ್ದರೂ ಯಾವ್ಯಾವ ಟ್ರೇಡಿನಲ್ಲಿ ಎಷ್ಟೆಷ್ಟು ಟರ್ನ್ ಓವರ್ ಆಯಿತೆಂದು ಬಾಯಲ್ಲೇ ಹೇಳಿ ಎಲ್ಲರನ್ನೂ ಅಚ್ಚರಿಪಡಿಸುತ್ತಿದ್ದ. ಭವರ್ ಲಾಲನ ಅದ್ಭುತ ಲೆಕ್ಕಾಚಾರದ ಭಯದಿಂದಾಗಿ ಕಂಪನಿಯ ವ್ಯವಹಾರದ ಎಲ್ಲಾ ಭಾಗದ ಕೆಲಸಗಾರರೂ ಒಂದೇ ಒಂದು ರೂಪಾಯಿ ಹೆಚ್ಚು ಕಡಿಮೆ ಮಾಡಲೂ ಹೆದರುತ್ತಿದ್ದರು. ಹಾಗಾಗಿ ಮೊಮ್ಮಗನ ಜೊತೆ ಗುನ್ನಾಲಾಲ್ ಹೆಚ್ಚು ಸಮಯ ಕಳೆಯುತ್ತಿದ್ದ. ತಾತ, ಮೊಮ್ಮಗ ಇಬ್ಬರು ಒಳ್ಳೆಯ ಸ್ನೇಹಿತರಾಗಿ ಬಿಟ್ಟಿದ್ದರು. ತಾತನೊಂದಿಗೆ ತುಂಬಾ ಸಲುಗೆಯಿದ್ದಿದ್ದರಿಂದ ತನಗೆ ಏನು ಬೇಕಾದರೂ ತಂದೆ ತಾಯಿಯರನ್ನು ಕೇಳದೆ ಸೋನಾಲಾಲ್ ತಾತನ ಮೊರೆ ಹೋಗುತ್ತಿದ್ದ. ಸೋನಾಲಾಲ್ ಎಲ್ಲಾ ತರಗತಿಗಳಲ್ಲೂ ಓದುವುದರಲ್ಲಿ ಮುಂದಿರುತ್ತಿದ್ದ. ಪಿಯುಸಿಯಲ್ಲಿ ಓದುವಾಗ ಮೊಮ್ಮಗ ಸೋನಾಲಾಲನಿಗೆ ಮತ್ತು ತನಗೆ ಏಕಕಾಲದಲ್ಲಿ ಬಿದ್ದ ಕನಸೊಂದರಿಂದ ಸೋನಾಲಾಲನ ಸ್ವಭಾವ, ನಡವಳಿಕೆಗಳೊಂದಿಗೆ ಅವನ ಹೆಸರೂ ಬದಲಾಯಿತು.

ಸೋನಾಲಾಲನಲ್ಲಿ ಶ್ರೀಮಂತ ಕುಟುಂಬದ ಮಕ್ಕಳಿಗಿರುವಂತೆ ಎಲ್ಲಾ ಕಲ್ಯಾಣ ಗುಣಗಳೂ